**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/01/ಇಪಿಎಸ್/2024

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560001
ದಿ: 16-04-2024.

**ಜ್ಞಾಪನ**

ವಿಷಯ: ಮೇ-2024 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯ ಕಾರ್ಯಗಳಿಗೆ ಬಿಟಿಇ ಲಿಂಕ್ಸ್ ಆನ್‌ಲೈನ್ ತಂತ್ರಾಂಶದಲ್ಲಿ ಉಪನ್ಯಾಸಕರು/ಸಿಬ್ಬಂದಿ ವರ್ಗದವರ ಮೊಬೈಲ್ ದೂರವಾಣಿ ಸಂಖ್ಯೆ ಮತ್ತು ಇ-ಮೇಲ್ ಐಡಿಯನ್ನು ಕಡ್ಡಾಯವಾಗಿ ಇಂದೀಕರಿಸುವ ಬಗ್ಗೆ (update).

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಬಿಟಿಇ/03/ಇಸಿಎಸ್(1)/2024, ದಿನಾಂಕ: 02.04.2024.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸುತ್ತೋಲೆಯಲ್ಲಿ ಮೇ-2024 ರ ಸೆಮಿಸ್ಟರ್ ಪರೀಕ್ಷೆಯ ಶೈಕ್ಷಣಿಕ ವೇಳಾಪಟ್ಟಿ (Calendar of Events) ಯನ್ನು ಪ್ರಕಟಿಸಲಾಗಿದೆ. ಸದರಿ ಶೈಕ್ಷಣಿಕ ವೇಳಾಪಟ್ಟಿಯಂತೆ ಪರೀಕ್ಷೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಪ್ರಾಚಾರ್ಯರು, ವಿಭಾಗಾಧಿಕಾರಿಗಳು, ಉಪನ್ಯಾಸಕರು ಮತ್ತು ಕಾರ್ಯಗಾರ ಸಿಬ್ಬಂದಿಯವರು ಕಡ್ಡಾಯವಾಗಿ ತಮ್ಮ ಮೊಬೈಲ್‌ನಲ್ಲಿ telegram app ಡೌನ್‌ಲೋಡ್ ಮಾಡಿಕೊಳ್ಳಲು ತಿಳಿಸಲಾಗಿದೆ. ಕಾಲಕಾಲಕ್ಕೆ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ತಿಳಿಸಲಾಗುವ Telegram group ಗೆ ಸೇರ್ಪಡೆಗೊಂಡು, ಸದರಿ ಗ್ರೂಪ್‌ನಲ್ಲಿ ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಲಾಗಿದೆ.

ಸದರಿ ಪರೀಕ್ಷೆಗೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಚಾರ್ಯರ, ವಿಭಾಗಾಧಿಕಾರಿಗಳ, ಉಪನ್ಯಾಸಕರುಗಳ ಮತ್ತು ಕಾರ್ಯಗಾರ ಸಿಬ್ಬಂದಿಯವರ ವೈಯಕ್ತಿಕ ಮೊಬೈಲ್ ಸಂಖ್ಯೆ (telegram app ಚಂದಾದಾರರಾಗಿರುವ) ಮತ್ತು ವೈಯಕ್ತಿಕ ಇ-ಮೇಲ್ ವಿಳಾಸವು ಅವಶ್ಯಕವಾಗಿರುತ್ತದೆ. ಆದ್ದರಿಂದ ಪ್ರಾಚಾರ್ಯರು, ವಿಭಾಗಾಧಿಕಾರಿಗಳ, ಉಪನ್ಯಾಸಕರು ಮತ್ತು ಕಾರ್ಯಗಾರ ಸಿಬ್ಬಂದಿಯವರ ವೈಯಕ್ತಿಕ ಮೊಬೈಲ್ ಸಂಖ್ಯೆ ಮತ್ತು ವೈಯಕ್ತಿಕ ಇ-ಮೇಲ್ ವಿಳಾಸಗಳನ್ನು ಬಿಟಿಇ ಲಿಂಕ್ಸ್ ಆನ್‌ಲೈನ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ಇಂದೀಕರಿಸಲು (update) ಸಂಸ್ಥೆಯ ಪ್ರಾಚಾರ್ಯರುಗಳು ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ಯಾವುದಾದರೂ ಸಂಸ್ಥೆಯ ಪ್ರಾಚಾರ್ಯರ, ವಿಭಾಗಾಧಿಕಾರಿಗಳ, ಉಪನ್ಯಾಸಕರುಗಳ ಮತ್ತು ಕಾರ್ಯಗಾರ ಸಿಬ್ಬಂದಿಯವರ ವೈಯಕ್ತಿಕ ಮೊಬೈಲ್ ಸಂಖ್ಯೆ ಮತ್ತು ವೈಯಕ್ತಿಕ ಇ-ಮೇಲ್ ವಿಳಾಸಗಳನ್ನು ಬಿಟಿಇ ಲಿಂಕ್ಸ್ ತಂತ್ರಾಂಶದಲ್ಲಿ ಇಂದೀಕರಿಸದಿದ್ದಲ್ಲಿ/ತಪ್ಪಾಗಿ ನಮೂದಿಸಿದಲ್ಲಿ, ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರ ಮೇಲೆ ಕೆ.ಸಿ.ಎಸ್ ನಿಯಮಾವಳಿ/ಕರ್ನಾಟಕ ಶಿಕ್ಷಣ ಕಾಯ್ದೆ 1983 ರನ್ವಯ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ.

ಇವರಿಗೆ,

ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪ್ರತಿ:

1. ನಿರ್ದೇಶಕರ ಆಪ್ತಶಾಖೆ – ಮಾಹಿತಿಗಾಗಿ.
2. ಉಪ ನಿರ್ದೇಶಕರು (ಪರೀಕ್ಷೆ) – ಮಾಹಿತಿಗಾಗಿ.
3. ಶ್ರೀ ಹರೀಶ ಶೆಟ್ಟಿ, ಪ್ರಾಚಾರ್ಯರು, ಕರ್ನಾಟಕ (ಸರಕಾರಿ) ಪಾಲಿಟೆಕ್ನಿಕ್, ಮಂಗಳೂರು – ಮಾಹಿತಿಗಾಗಿ.
4. ಇ-ಆಡಳಿತ ವಿಭಾಗ – ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.